ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 274/2024**

| ಸಾಕ್ಷಿಯ ಹೆಸರು | ಡಾ. ಹರ್ಷ ರಾಜ್ ಜಿ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಗೋವಿಂದರಾಜು | 9 | 7 |
| ವಯಸ್ಸು | 32 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **08.06.2026.** | |
| ಉದ್ಯೋಗ | ವೈದ್ಯರು, ಜಿಲ್ಲಾ ಆಸ್ಪತ್ರೆ ತುಮಕೂರು | | |
| ವಾಸ ಸ್ಥಳ | ತುಮಕೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 01.09.2022 ರಿಂದ 15.01.2025 ರವರೆಗೆ ದಯಾನಂದ ಸಾಗರ್ ಆಸ್ಪತ್ರೆ ವೈದ್ಯರಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 20.04.2024 ರಂದು ಮಧ್ಯರಾತ್ರಿ 2.00 ಗಂಟೆ ಸಮಯದಲ್ಲಿ ಗಾಯಾಳು ಮಹದೇವ ಎನ್ನುವವರನ್ನು ಅವರ ಸ್ನೇಹಿತ ಮಣಿಕಂಠ ಹಲ್ಲೆಗೆ ಒಳಪಟ್ಟ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಅವರಿಗೆ ಗೊತ್ತಿದ 5 – 6 ಜನ ವ್ಯಕ್ತಿಗಳು ದೊಣ್ಣೆ ಪೈಪ್ ನಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ಅವರನ್ನು ಪರೀಕ್ಷಿಸಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

a. ಎದೆಯ ಮೇಲೆ ಹಲವಾರು ತರಚಿದ ಗಾಯಗಳು 3 x 2 ಸೆ.ಮಿ. ಮತ್ತು 1 x 1 ಸೆ.ಮಿ. ಇತ್ತು.

b. ಎದೆಯ ಎಡಭಾಗದಲ್ಲಿ ನೋವು ಕಂಡು ಬಂತು.

c. ಎಡ ಕಣ್ಣಿನ ಉಬ್ಬು ಮತ್ತು ಸುತ್ತ ನೋವು ಮತ್ತು ಊತ ಇತ್ತು.

d. ಕುತ್ತಿಗೆಯಲ್ಲಿ ನೋವು ಕಂಡು ಬಂತು.

e. ಬೆನ್ನು ಮಧ್ಯಭಾಗದಲ್ಲಿ ನೋವು ಕಂಡು ಬಂತು.

2. ಮೇಲ್ಕಂಡ ಗಾಯಗಳು ಪೈಕಿ 1 ರಿಂದ 4 ನೇ ಗಾಯಗಳು ನನ್ನ ಅಭಿಯಪ್ರಾಯದಲ್ಲಿ ಸಾದಾ ಸ್ವರೂಪದ ಗಾಯಗಳು ಆಗಿದ್ದು, 5 ನೇ ಗಾಯವು ನನ್ನ ಅಭಿಯಪ್ರಾಯದಲ್ಲಿ ತೀವ್ರ ಸ್ವರೂಪದ ಗಾಯ ಆಗಿತ್ತು. ಗಾಯಾಳುವಿಗೆ ಸೂಕ್ತ ಚಿಕಿತ್ಸೆ ನೀಡಿ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ನಾನು ನೀಡಿರುವ ಗಾಯಾದ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು ನಿಶಾನೆ.ಪಿ. 7 ಎಂತಲೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.7 (ಎ) ಎಂದು ಗುರುತಿಸಲಾಯಿತು. ಸದರಿ ಗಾಯಗಳು ಈಗ ತೋರಿಸಿದ ಮು.ಮಾ. 1 ರಿಂದ 4 ರಲ್ಲಿ ಹೊಡೆದರೆ ಆಗುವ ಸಾಧ್ಯತೆಗಳು ಇವೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **NSG** ವಕೀಲರಿಂದ :

1. ಗಾಯಾಳು ನಿಖರವಾಗಿ ನಮ್ಮ ಆಸ್ಪತ್ರೆಗೆ ಎಷ್ಟು ಗಂಟೆಗೆ ಬಂದರು ಎಂದು ಹೇಳಲು ಆಗುವುದಿಲ್ಲ. ಅವರು ಯಾವ ರೀತಿ ನಮ್ಮ ಆಸ್ಪತ್ರೆಗೆ ಬಂದರು ಮತ್ತು ಅವರ ಜೊತೆಗೆ ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ. ಅವರು ಬಂದಾಗ ಮಧ್ಯಪಾನ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ. ಗಾಯಾಳು ಮಧ್ಯಪಾನ ಮಾಡಿದ್ದರೋ ಇಲ್ಲವೋ ಎಂಬ ಬಗ್ಗೆ ನಮ್ಮ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಲ್ಲ, ಕಾರಣ ನಮ್ಮ ಆಸ್ಪತ್ರೆಯ ಆ ಸೌಲಭ್ಯ ಇಲ್ಲ. 1 ನೇ ಗಾಯದಲ್ಲಿ ರಕ್ತ ಬಂದಿತ್ತು. ತರಚಿದ ಗಾಯಕ್ಕೆ ಯಾವುದೇ ಹೊಲಿಗೆ ಹಾಕುವುದಿಲ್ಲ. ಮೇಲ್ಕಂಡ ಗಾಯಗಳು ಜೀವ ಹೋಗುವ ಗಾಯಗಳು ಅಲ್ಲ ಎಂದರೆ, 1 ರಿಂದ 4 ನೇ ಗಾಯಗಳು ಜೀವ ಹೋಗುವ ಗಾಯಗಳು ಅಲ್ಲ ಆದರೆ 5 ನೇ ಗಾಯದ ಬಗ್ಗೆ ಹೇಳಲು ಬರುವುದಿಲ್ಲ. ಟ್ರಾಕ್ಟರ್ ನಲ್ಲಿ ಹೋಗುವಾಗ ಹಳ್ಳದಲ್ಲಿ ಜರ್ಕ್ ಹೊಡೆದರೆ 5 ನೇ ಗಾಯದ ರೀತಿ ಆಗುವ ಸಾಧ್ಯತೆ ಇದೆ.

2. ಸಾಮಾನ್ಯವಾಗಿ ಗಾಯಾಳು ಇಂತಹವರ ಹೊಡೆದರೆ ಎಂದು ಹೇಳಿದರೆ MLC ಯಲ್ಲಿ ಬರೆಯುತ್ತೇವೆ ಎಂದರೆ ಸರಿ. ಗಾಯಾಳು ನಮ್ಮ ಆಸ್ಪತ್ರೆಗೆ ಬಂದಾಗ ಪ್ರಜ್ಞಾವಸ್ಥೆಯಲ್ಲಿ ಇದ್ದರು. ಇಂತಹವರೆ ಹೊಡೆದಿದ್ದಾರೆ ಎಂದು ಹೆಸರನ್ನು ಹೇಳಿಲ್ಲ. ಗಾಯಾಳು ಕಲ್ಲಿನ ಬಗ್ಗೆ ಹೇಳಿಲ್ಲ ಎಂದರೆ ಸರಿ. ಮು.ಮಾ. 1 ರಿಂದ 4 ಗಳು ರಸ್ತೆಯಲ್ಲಿ ಸಿಗುತ್ತವೆ ಎಂದರೆ ಸರಿ. ಇದೇ ವಸ್ತುಗಳಿಂದ ಅವರಿಗೆ ಹಲ್ಲೆಯಾಗಿದೆ ಎಂದು ಹೇಳಲು ಬರುವುದಿಲ್ಲ. CT Scan and X-Ray Film ಅನ್ನು ಪೊಲೀಸರಿಗೆ ನೀಡಿಲ್ಲ. ರಾತ್ರಿ 10.30 ರಿಂದ 2.00 ಗಂಟೆಯವರೆಗೆ ಗಾಯಾಳು ಎಲ್ಲಿ ಇದ್ದರು ಮತ್ತು ಏನು ಮಾಡುತ್ತಿದ್ದರು ಎಂದು ನಾನು ಬರೆದುಕೊಂಡಿಲ್ಲ. ಅವರು ಮೊದಲು Causality ಗೆ ಹೋಗಿದ್ದು ನಾನು ಅವರಿಗೆ ಚಿಕಿತ್ಸೆ

ನೀಡಿದ್ದೇನೆ. ಸಮಾನ್ಯವಾಗಿ Causality ಯಲ್ಲಿ X-Ray ಮಾಡುತ್ತೇವೆ ಅದರ ಬಗ್ಗೆ ಕೂಲಂಕೂಷ ಪರೀಕ್ಷೆ ಮಾಡುವುದಿಲ್ಲ.

3. ಆಸ್ಪತ್ರೆಯಲ್ಲಿ ಗಾಯಾಳುವಿನ ಜೊತೆಗೆ ರಾತ್ರಿ ಯಾರು ಇದ್ದರು ಎಂದು ಗೊತ್ತಿಲ್ಲ. ಮುಂದುವರಿದ ಚಿಕಿತ್ಸೆಯನ್ನು ಕೀಲುಮೂಳೆ ತಜ್ಞರು ನೀಡಿದ್ದು ಅವರ ಹೆಸರು ಗೊತ್ತಿಲ್ಲ. Compression Fracture ಇದ್ದರಿಂದ ಅವರು ಚಿಕಿತ್ಸೆ ನೀಡಿದ್ದರು. ಮಧ್ಯಪಾನ ಮಾಡಿ ವಾಹನದಿಂದ ಬಿದ್ದು ಎದ್ದು ಬಂದರೆ ಈ ರೀತಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಅವರು 5 ದಿನ ಒಳರೋಗಿಯಾಗಿ ದಾಖಲು ಆಗಿದ್ದರು. ಅವರು ಬಿಡುಗಡೆಯಾಗುವ ಸಮಯಕ್ಕೆ ಸಂಪೂರ್ಣವಾಗಿ ಗುಣವಾಗಿದ್ದರು. ಅವರ ಜೀವಕ್ಕೆ ಹಾನಿಯಾಗುವ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿ. ಅವರು ಮುಂದುವರಿದ ಚಿಕಿತ್ಸೆಯನ್ನು ನಮ್ಮ ಆಸ್ಪತ್ರೆಯಲ್ಲಿ ಪಡೆದರೋ ಇಲ್ಲವೋ ಗೊತ್ತಿಲ್ಲ. ನಮ್ಮ ಆಸ್ಪತ್ರೆಗೆ ಯಾವುದೇ ಪೊಲೀಸರು ಬಂದು ಹೇಳಿಕೆ ಮಾಡಿಕೊಂಡಿದ್ದರೋ ಇಲ್ಲವೋ ಗೊತ್ತಿಲ್ಲ. ನನಗೆ ಆ ಗಾಯಾಗಳು ಯಾವ ರೀತಿ ಆಗಿತ್ತು ಎಂದು ವೈಯಕ್ತಿಕ ಮಾಹಿತಿ ಇಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.